**O. S. No:263/2024**
**PW:1**

(ಇಂದು ದಿನಾಂಕಃ **05-03-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಎಸ್ ವಿ ಎಂ ವಕೀಲರಿಂದಃ**

ನನ್ನ ತಾಯಿಯ ಹೆಸರು ಲಲಿತಾ. ನನ್ನ ಚಿಕ್ಕಮ್ಮನ ಹೆಸರು ಬಸಮ್ಮ. 1 ನೇ ಪ್ರತಿವಾದಿ ನನ್ನ ತಾಯಿ. ಕಿತ್ತೂರು ಗ್ರಾಮದ ಜಮೀನು ಸರ್ವೇ ನಂಃ 91/4 ಕ್ಷೇತ್ರ 3 ಎಕರೆ ಜಮೀನನ್ನು ನನ್ನ ಗಂಡ, 1 ನೇ ಪ್ರತಿವಾದಿ ಹಾಗೂ ನನ್ನ ಗಂಡನ ತಂದೆ ಮಲ್ಲಿಕಾರ್ಜುನಗೌಡರವರು ಸೇರಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಾವ ನಮಗೆ ಗೊತ್ತಾಗದ ಹಾಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಖರೀದಿ ಪತ್ರಕ್ಕೆ 1 ನೇ ಪ್ರತಿವಾದಿ ಹಾಗೂ ನನ್ನ ಗಂಡ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ನಾವೆಲ್ಲರೂ ಮೀಲಾಪಿಯಾಗಿ ಮಾರಾಟ ಮಾಡಿ ಬಂದ ಹಣವನ್ನು ನಾವೇ ತೆಗೆದುಕೊಂಡಿದ್ದು 2 ನೇ ಪ್ರತಿವಾದಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಾರಾಟ ಮಾಡುವ ಅವಶ್ಯಕತೆ ನಮ್ಮ ಕುಟುಂಬಕ್ಕೆ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ಮಾವನಿಗೆ ಗೊತ್ತು ಎಂದು ನುಡಿದಿರುತ್ತಾರೆ. ಸದರಿ ಮಾರಾಟವನ್ನು 2 ನೇ ಪ್ರತಿವಾದಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ 1 ನೇ ಪ್ರತಿವಾದಿ, ನನ್ನ ಗಂಡ ಹಾಗೂ ನನ್ನ ಮಾವ 2 ನೇ ಪ್ರತಿವಾದಿಗೆ ಬೇರೆ ಜಮೀನನ್ನು ಕೊಡುವುದಾಗಿ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ 1 ನೇ ಪ್ರತಿವಾದಿಗೆ ಜಮೀನು ಸರ್ವೇ ನಂಃ 72/36 ಹಾಗೂ 72/37 ನ್ನು ಭಕ್ಷೀಸ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಿಸಿ ರೋಣ ತಾಲ್ಲೂಕಿನ ಗುಜಮಾಗಡಿ ಗ್ರಾಮದಲ್ಲಿ ನಮಗೆ ಸಂಬಂಧಿಸಿ ನಿವೇಶನ ಇದೆ ಎಂದರೆ ಸರಿ. ಸದರಿ ಆಸ್ತಿಯ ಸಂಖ್ಯೆ ನನಗೆ ನೆನಪಿಲ್ಲ. ಸದರಿ ಆಸ್ತಿ ನನಗೆ, ಪ್ರತಿವಾದಿಯರಿಗೆ ಸಂಬಂಧಿಸಿದ್ದು ಎಂದರೆ ಸರಿ. ನಮ್ಮೆಲ್ಲರಿಗೂ ಜಂಟಿಯಾಗಿ ಗುಜಮಾಗಡಿ ಗ್ರಾಮದಲ್ಲಿ ಇರುವ ಆಸ್ತಿ ಯಾವುದು ಹಾಗೂ ನಮಗೆ ಮಾತ್ರ ಸಂಬಂಧಿಸಿದ್ದು ಆಸ್ತಿ ಯಾವುದು ಎಂದು ಹೇಳಲಾಗುವುದಿಲ್ಲ. ಸದರಿ ಗ್ರಾಮದ ಆಸ್ತಿ ವಿ ಪಿ ಸಿ ಸಂಃ 596 ಹಾಗೂ 595 ಅವುಗಳ ನಿವೇಶನ ಸಂಃ 3 ಮತ್ತು 4 ಗಳು ನಮ್ಮೆಲ್ಲರಿಗೂ ಸಂಬಂಧಿಸಿದ್ದು ಎಂದರೆ 1 ಮಾತ್ರ ಸಂಬಂಧಿಸಿದ್ದು ಎಂದು ನುಡಿದಿರುತ್ತಾರೆ. ನಿಪಿ-4 ಈಗ ನನ್ನ ಹಾಗೂ ಪ್ರತಿವಾದಿಯರ ಹೆಸರಿನಲ್ಲಿ ಜಂಟಿಯಾಗಿದೆ ಎಂದರೆ ಸರಿ. ಇನ್ನೊಂದು ಆಸ್ತಿ ವಿ ಪಿ ಸಿ ಸಂಃ 596 ಇದು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ಸದರಿಯವರ ಹೆಸರು ಸದರಿ ಆಸ್ತಿಗೆ ಯಾವ ರೀತಿ ದಾಖಲಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಸದರಿ ಆಸ್ತಿಯಲ್ಲಿಯೂ ಸಹ ನನಗೆ ಹಾಗೂ ಪ್ರತಿವಾದಿಯರಿಗೆ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಸದರಿ ಆಸ್ತಿಯಲ್ಲಿ ಪಾಲು

ಕೊಡಬಾರದು ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ.  ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**